2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ145/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸುಧೀರ್ | ಪಿಡಬ್ಲೂ-10 |
| ತಂದೆಯ ಹೆಸರು | - | ಬಸವೇಗೌಡ | ಸಿಡಬ್ಲೂ -12 |
| ವಯಸ್ಸು | - | 56 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಮಾಕೋಡು | |

ದಿನಾಂಕಃ 08.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತಿಲ್ಲ. ನಾನು ಆತನನ್ನು ನೋಡಿಲ್ಲ. ಮೃತ ಅಮಿಷಾ ಗೊತ್ತು. ಆಕೆಯ ತಾಯಿಯಾದ ಚಾಸಾ.7 ರೇಶ್ಮಾ ಮತ್ತು ತಂದೆಯಾದ ಜಿಲಾನ್ ಜೋಳದಾಳ್ ಪಾಳ್ಯ ಗ್ರಾಮದಲ್ಲಿರುವ ಸರ್ವೆ ನಂಬರ್ 119 ರಲ್ಲಿರುವ ನನ್ನ ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಸದರಿ ತೋಟದಲ್ಲಿ ಕೂಲಿ ಕಾರ್ಮಿಕರಿಗಾಗಿ ಒಂದು ಲೈನಿನಲ್ಲಿ ಒಟ್ಟು 6 ಮನೆಗಳಿದ್ದವು ಅವುಗಳಲ್ಲಿ ಒಂದರಲ್ಲಿ ಮೇಸ್ತ್ರಿ ವಾಸವಾಗಿದ್ದನು. ಉಳಿದ ಮನೆಗಳಲ್ಲಿ ಕೂಲಿ ಕಾರ್ಮಿಕರು ವಾಸವಾಗಿದ್ದರು. ರೇಶ್ಮಾಳ ತಾಯಿಯಾದ ಬೀಬಿಜಾನ್ ಸಹ ನಮ್ಮ ಕಾಫಿ ತೋಟದಲ್ಲಿಯೇ ಕೂಲಿ ಕೆಲಸ ಮಾಡುತ್ತಿದ್ದಳು ಮತ್ತು ರೇಶ್ಮಾ ಆಕೆಯ ಗಂಡ ಮತ್ತು ತಾಯಿ ನಮ್ಮ ತೋಟದಲ್ಲಿರುವ ಕೂಲಿ ಕಾರ್ಮಿಕರ ಲೈನಿನಲ್ಲಿ

ವಾಸವಾಗಿದ್ದರು.

2. ಬೀಬಿಜಾನ್ ಮತ್ತು ರೇಶ್ಮಾ 2019 ನೇ ಇಸವಿಯಲ್ಲಿ ನನ್ನ ಕಾಫಿ ತೋಟಕ್ಕೆ ಬಂದಿದ್ದರು ಮತ್ತು ಅವರು ಕೇವಲ ಮೂರು ತಿಂಗಳು ನಮ್ಮ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದರು. 2019 ನೇ ಇಸವಿಯ ಆಗಸ್ಟ್ ತಿಂಗಳಿನಲ್ಲಿ ಒಂದು ದಿನ ನಾನು ಬೆಂಗಳೂರಿಗೆ ಹೋಗಿದ್ದ ಸಮಯದಲ್ಲಿ ನಮ್ಮ ತೋಟದ ರೈಟರ್ ಆದ ವಸಂತಕುಮಾರ್ ರವರು ನನಗೆ ಫೋನ್ ಮಾಡಿ ಜೋಳದಾಳ್ ಪಾಳ್ಯದ ಗ್ರಾಮದ ನನ್ನ ಕಾಫಿ ತೋಟದಲ್ಲಿರುವ ಕೂಲಿ ಲೈನ್ ನ ಮನೆಯಲ್ಲಿ ಒಂದು ಹೆಣ್ಣು ಮಗು ಆರೋಗ್ಯ ಸರಿ ಇಲ್ಲದೇ ಮೃತಪಟ್ಟಿರುವುದಾಗಿ ತಿಳಿಸಿದರು. ನಂತರ ಪೊಲೀಸರು ಅಲ್ಲಿಗೆ ಹೋಗಿ ಸದರಿ ಮಗುವಿನ ಕೊಲೆಯಾಗಿರುವ ಬಗ್ಗೆ ತಿಳಿಸಿದ್ದಾಗಿ ಮೇಲೆ ತಿಳಿಸಿದ ವಸಂತಕುಮಾರ್ ಪುನಃ ನನಗೆ ಫೋನ್ ಮಾಡಿ ತಿಳಿಸಿದರು. ರೇಶ್ಮಾ ಮೃತ ಹೆಣ್ಣು ಮಗು ಸೇರಿ ಆಕೆಗೆ ಎರಡು ಹೆಣ್ಣು ಮಕ್ಕಳು ಇರುವುದಾಗಿ ತಿಳಿಸಿದ್ದಳು.

3. ಸಾಕ್ಷಿಯು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ಕಂಡು ಬರುವ ಮಗುವಿನ ಮೃತ ದೇಹ ರೇಶ್ಮಾಳ ಮಗಳದ್ದು ಎಂದು ನುಡಿದಿರುತ್ತಾರೆ. ರಾತ್ರಿ ಸಮಯದಲ್ಲಿ ಯಾರೋ ಒಬ್ಬ ವ್ಯಕ್ತಿ ನಮ್ಮ ತೋಟದ ಕೂಲಿ ಲೈನಿಗೆ ಬಂದು ಸದರಿ ಮಗುವನ್ನು ಕೊಲೆ ಮಾಡಿರುವುದಾಗಿ ನಮ್ಮ ರೈಟರ್ ನನಗೆ ತಿಳಿಸಿದ್ದರು. ಆ ಮಗುವನ್ನು ಕೊಲೆ

ಮಾಡಿದ ವ್ಯಕ್ತಿ ಯಾರು ಎಂದು ನನಗೆ ತಿಳಿದಿಲ್ಲ. ಸದರಿ ಘಟನೆಯಾದ 2 ತಿಂಗಳ ಬಳಿಕ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಆಗ ನಾನು ಈ ದಿನ ನ್ಯಾಯಾಲಯದಲ್ಲಿ ಹೇಳಿದ ವಿಚಾರಗಳನ್ನು ತಿಳಿಸಿ ಹೇಳಿಕೆ ಕೊಟ್ಟಿದ್ದೇನೆ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ವಿಷಯಗಳನ್ನು ತಿಳಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

4. 2018 ನೇ ಇಸವಿಯಲ್ಲಿ ರೇಶ್ಮಾ ತನ್ನ ಮೂರು ಜನ ಚಿಕ್ಕ ಹೆಣ್ಣು ಮಕ್ಕಳೊಂದಿಗೆ ನಮ್ಮ ತೋಟಕ್ಕೆ ಬಂದು ಕೂಲಿ ಕೆಲಸ ಮಾಡಿಕೊಂಡು ಕೂಲಿ ಲೈನ್ ನಲ್ಲಿ ವಾಸವಾಗಿದ್ದಳು ಎಂದರೆ ಸಾಕ್ಷಿ ಮೂರು ಜನ ಹೆಣ್ಣು ಮಕ್ಕಳೊಂದಿಗೆ ಬಂದಿದ್ದಳು ಆದರೆ ನನ್ನ ಪ್ರಕಾರ ಆಕೆ ಬಂದಿದ್ದು 2019 ನೇ ಇಸವಿಯಲ್ಲಿ ಎನ್ನುತ್ತಾರೆ. ರೇಶ್ಮಾಳೊಂದಿಗೆ ಆಕೆಯ ತಂದೆ ತಾಯಿ ಒಂದು ಮನೆಯಲ್ಲಿ, ಮತ್ತೊಂದು ಮನೆಯಲ್ಲಿ ಆಕೆಯ ತಂಗಿ ಬಾನು ಮತ್ತು ಆಕೆಯ ಗಂಡ ನಾಗರಾಜ್ ಸಹ ಕೂಲಿ ಲೈನಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ಘಟನೆಯ 5 ವರ್ಷಗಳ ಹಿಂದೆ ರೇಶ್ಮಾಳ ಗಂಡ ಮೃತಪಟ್ಟಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಾಫಿ ತೋಟದ ಉಸ್ತುವಾರಿಯನ್ನು ಮೇಸ್ತ್ರಿ ರವಿರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

5. ದಿನಾಂಕ 04.08.2019 ರಂದು ನಾನು ಬೆಂಗಳೂರಿಗೆ ಹೋಗಿದ್ದ ಸಮಯದಲ್ಲಿ ನನ್ನ ತೋಟದ ರೈಟರ್ ಆದ ಚಾಸಾ.11 ರವಿರವರು ನನಗೆ ಕರೆ ಮಾಡಿ ರೇಶ್ಮಾಳ ಹೆಣ್ಣು ಮಗು ಅಮಿಷಾ ಮೃತಪಟ್ಟಿರುವುದಾಗಿ ತಿಳಿಸಿ ಮತ್ತು ಆ ಬಗ್ಗೆ ವಿಚಾರ ಮಾಡಿದಾಗ ಹಿಂದಿನ ದಿನ ರಾತ್ರಿ 12.00 ಗಂಟೆ ಸಮಯದಲ್ಲಿ ರೇಶ್ಮಾರವರಿಗೆ ಪರಿಚಯವಿದ್ದ ಲಿಂಗರಾಜು ಎಂಬ ವ್ಯಕ್ತಿ ಯಾವುದೋ ಆಟೋದಲ್ಲಿ ಆಕೆಯ ಮನೆಗೆ ಹೋಗಿ ಅವರೊಂದಿಗೆ ಮಾತನಾಡಿ ರೇಶ್ಮಾಳಿಗೆ ಏನೋ ಕುಡಿಸಿದ್ದರಿಂದ ಆಕೆಗೆ ಜ್ಞಾನ ಇಲ್ಲದಂತಾಯಿತು ಎಂತಲೂ ಮತ್ತು ನಂತರದಲ್ಲಿ ಸದರಿ ಲಿಂಗರಾಜು ಎರಡು ಖಾಲಿ ಹಾಳೆಗಳಿಗೆ ಆಕೆಯ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡು ಬೆಳಿಗ್ಗೆ ಸುಮಾರು 2.00 ಗಂಟೆಗೆ ಮನೆಯಿಂದ ಹೋಗಿದ್ದಾಗಿ ಮತ್ತು ಆ ಅವಧಿಯಲ್ಲಿ ಸದರಿ ಲಿಂಗರಾಜನು ಯಾವುದೋ ರೀತಿಯಲ್ಲಿ ಮಗುವನ್ನು ಸಾಯಿಸಿ ಹೋಗಿರುವುದಾಗಿ ತಿಳಿಯಿತು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಇನ್ನೂ ಹೆಚ್ಚಿನ ವಿಚಾರ ತಿಳಿಯಲಾಗಿ ರೇಶ್ಮಾಳ ಗಂಡ ತೀರಿ ಹೋದ ಬಳಿಕ ಆಗ್ಗೆ 3 ವರ್ಷಗಳಿಂದ ಆಕೆಯ ಊರಿನ ಲಿಂಗರಾಜು ಎನ್ನುವ ವ್ಯಕ್ತಿಯೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿದ್ದು ಅದರ ಪರಿಣಾಮವಾಗಿ ಅಮಿಷಾ ಎಂಬ ಹೆಣ್ಣು ಮಗು ಹುಟ್ಟಿದೆ ಎಂದು ಆತ ಇತ್ತೀಚೆಗೆ ಪೊಲೀಸ್ ಕೆಲಸಕ್ಕೆ ಸೇರಿ ಕಡೂರಿನಲ್ಲಿ ಟ್ರೇನಿಂಗ್ ಮಾಡುತ್ತಿದ್ದು ಆಗಾಗ್ಗೆ ರೇಶ್ಮಾಳ ಬಳಿ ಬಂದು

ಹೋಗುತ್ತಿದ್ದ ಬಗ್ಗೆ ಸದರಿ ರವಿರವರಿಂದ ತಿಳಿಯಿತು ಎಂದರೆ ಸರಿಯಲ್ಲ. ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಈ ವಿಚಾರಗಳನ್ನು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯ ಭಾಗವನ್ನು ನಿಪಿ.20 ಎಂದು ಗುರುತಿಸಲಾಯಿತು.

6. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.20 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿಯೊಂದಿಗೆ ಶಾಮೀಲಾಗಿ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.